# ನಾಯಕನ ವೈಭವೀಕರಣವೇ ಗೆಲುವಿನ ಮಂತ್ರ: ಸಂಜಯ್



ಕೆಲವು ಸಿನಿಮಾಗಳ ಗೆಲುವು ಅನೇಕರ ಕಣ್ಣುಗಳನ್ನು ಅಗಲ ಮಾಡುತ್ತವೆ. 'ಪುಷ್ಪಾ', 'ಆರ್‌ಆರ್‌ಆರ್' ಹಾಗೂ 'ಕೆಜಿಎಫ್2' ಬಾಕ್ಸ್‌ಆಫೀಸ್ ಗಳಿಕೆಗಳೂ ಹಾಗೆಯೇ ಮಾಡಿರುವುದು. ದಕ್ಷಿಣ ಭಾರತದ ಚಿತ್ರಗಳು ಗೆಲ್ಲುತ್ತಿರುವ ಮಟ್ಟಕ್ಕೆ ಬಾಲಿವುಡ್ ಸಿನಿಮಾಗಳು ಜಯಭೇರಿ ಬಾರಿಸುತ್ತಿಲ್ಲವೇಕೆ ಎಂಬ ಪ್ರಶ್ನೆ ಈಗ ಮುನ್ನೆಲೆಗೆ ಬಂದಿದೆ. ಈ ಚರ್ಚೆಯ ಕಾವಿಗೆ ತುಪ್ಪ ಸುರಿದವರಲ್ಲಿ ಸಂಜಯ್ ದತ್ ಕೂಡ ಇದ್ದಾರೆ.

'ಕೆಜಿಎಫ್2'ನಲ್ಲಿ ಅಧೀರನ ಪಾತ್ರದಲ್ಲಿ ಅವರು ಅಭಿನಯಿಸಿದ್ದರು. ಅವರ ಪ್ರಕಾರ ಹಿಂದಿ ಸಿನಿಮಾಗಳು ಇಡೀ ಭಾರತವನ್ನು ದೃಷ್ಟಿಯಲ್ಲಿಟ್ಟುಕೊಂಡು ತಯಾರಾಗುತ್ತಿಲ್ಲ. ನಾಯಕನ ವೈಭವೀಕರಣವನ್ನೂ ಅವು ಮರೆತುಬಿಟ್ಟಿವೆ. ರಾಜಸ್ಥಾನ, ಬಿಹಾರ, ಮಧ್ಯಪ್ರದೇಶ ತರಹದ ರಾಜ್ಯಗಳ ಪ್ರೇಕ್ಷಕರನ್ನು ಹಿಂದಿ ಚಿತ್ರಗಳೂ ಮರೆತೇಬಿಟ್ಟಿವೆ.

ದಕ್ಷಿಣ ಭಾರತದ ಚಿತ್ರಗಳು ನಾಯಕನ ವೈಭವೀಕರಣವನ್ನು ಇವತ್ತಿಗೂ ಪೋಷಿಸುತ್ತಾ ಬಂದಿವೆ. 'ಪುಷ್ಪಾ', 'ಆರ್‌ಆರ್‌ಆರ್' ಹಾಗೂ 'ಕೆಜಿಎಫ್2' ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇದು ಸ್ಪಷ್ಟವಾಗುತ್ತದೆ. ಜನಪ್ರಿಯ ಸಿನಿಮಾ ನೋಡುವ ಅನೇಕರಿಗೆ ನಾಯಕ ಸಹಜ ಬದುಕಿನ ಎಲ್ಲರಲ್ಲಿ ಒಬ್ಬನಂತೆ ಇರಬೇಕಾಗಿಲ್ಲ. ಅವನು ದೊಡ್ಡ ಮಟ್ಟದಲ್ಲಿ ಏನನ್ನಾದರೂ ಮಾಡಬೇಕು. ಸೂಪರ್ ಹೀರೊ ತರಹದ ಕೆಲವು ಗುಣಲಕ್ಷಣಗಳು ಅವನಲ್ಲೂ ಇರಬೇಕು ಎಂದು ಬಯಸುತ್ತಾರೆ. ಹಿಂದೆ ಹಿಂದಿ ಚಿತ್ರಗಳಲ್ಲಿ ಅಮಿತಾಭ್ ಬಚ್ಚನ್, ಧರ್ಮೇಂದ್ರ ಮನರಂಜನೆ ನೀಡಿದ್ದು ಅಂತಹ ಚಿತ್ರಗಳಿಂದಲೇ ಎನ್ನುವುದು ಸಂಜಯ್ ದತ್ ವಿಶ್ಲೇಷಣೆ.

ತಾವು ಚಿತ್ರರಂಗ ಪ್ರವೇಶಿಸಿದ ಕಾಲದಲ್ಲೂ ನಾಯಕನ ವೈಭವೀಕರಣ ಇತ್ತು ಎನ್ನುವ ಅವರು ಈಗೀಗ ಅದು ಹಿಂದಿ ಭಾಷೆಯ ಚಿತ್ರಗಳಲ್ಲಿ ಮರೆಯಾಗಿರುವುದರತ್ತ ಬೊಟ್ಟು ಮಾಡುತ್ತಾರೆ.

'ಭೂಮಿ' ಹಿಂದಿ ಚಿತ್ರದಲ್ಲಿ ಸಂಜಯ್ ದತ್ ಕೈಕಟ್ಟಿ ನ್ಯಾಯಾಲಯದಲ್ಲಿ ನಿಂತುಕೊಳ್ಳುವ ಪಾತ್ರವೊಂದಿದೆ. ಯಾರೋ ಅಭಿಮಾನಿ ಅದನ್ನು ನೋಡಿದ ಮೇಲೆ, 'ಕೋರ್ಟನ್ನೇ ಸ್ಫೋಟಿಸಿ ಹೊರಬರಬೇಕಾದವನು ನೀನು. ಹಾಗೆ ಕೈಕಟ್ಟಿಕೊಂಡು ನಿಂತರೆ ಯಾರು ಸಿನಿಮಾ ನೋಡುತ್ತಾರೆ' ಎಂದಿದ್ದನಂತೆ. ಈ ಘಟನೆಯನ್ನು ಮೆಲುಕುಹಾಕುವ ಸಂಜಯ್ ದತ್ ಸಿನಿಮಾದ ಮೌಲ್ಯಪಲ್ಲಟದ ಬಗೆಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಗೆಲುವಿನ ದಾರಿಯೇನು ಎಂದಷ್ಟೆ ಹೇಳಿದ್ದಾರೆ.

■ **ವಿಶಾಖ ಎನ್.**

# ಶಾರುಖ್-ಹಿರಾನಿ ಒಂದಾದಮೇಲೆ...



ಶಾರುಖ್ ಖಾನ್ ಉಲ್ಲಾಸಭರಿತರಾಗಿದ್ದಾರೆ. ಯಾಕೆಂದರೆ, ಕೊನೆಗೂ ರಾಜ್‌ಕುಮಾರ್ ಹಿರಾನಿ ನಿರ್ದೇಶನದ ಸಿನಿಮಾದಲ್ಲಿ ಕೆಲಸ ಮಾಡುವ ಅವಕಾಶ ಅವರದ್ದಾಗಿದೆ. 'ಡಂಕಿ' ಎನ್ನುವುದು ಸಿನಿಮಾದ ಶೀರ್ಷಿಕೆ. ಮುಂದಿನ ವರ್ಷ ಡಿಸೆಂಬರ್‌ನಲ್ಲಿ ಈ ಚಿತ್ರ ಬಿಡುಗಡೆಯಾಗಲಿದೆ.

ಈ ಚಿತ್ರ ಶುರುವಾಗಲಿದೆ ಎನ್ನುವುದಕ್ಕೇ ಚಿಕ್ಕ ವಿಡಿಯೊವೊಂದನ್ನು ಶಾರುಖ್ ಹಾಗೂ ರಾಜ್‌ಕುಮಾರ್ ಹಿರಾನಿ ತಯಾರಿಸಿದ್ದಾರೆ. ಶಾರುಖ್ ಖಾನ್ ಪಡಸಾಲೆಯಲ್ಲಿ ನಿಂತು ಹಿರಾನಿ ನಿರ್ದೇಶನದ ಹಳೆಯ ಪೋಸ್ಟರ್‌ಗಳನ್ನು ನೋಡುತ್ತಾ ಬೆರಗುಗೊಳ್ಳುತ್ತಾ ಇರುತ್ತಾರೆ. ಆಗ ರಾಜ್‌ಕುಮಾರ್ ಅಲ್ಲಿಗೆ ಬಂದು ಶಾರುಖ್ ಅವರ ಕುಶಲೋಪರಿ ಕೇಳುತ್ತಾರೆ. ತಮಗೂ ಅಂಥದ್ದೇನೂ ಸಬ್ಜೆಕ್ಟ್ ಇಲ್ಲವೇ ಎಂದು ನೇರವಾಗಿ ಶಾರುಖ್ ಕೇಳುತ್ತಾರೆ. ತಕ್ಷಣವೇ ಒಂದು ಸ್ಕ್ರಿಪ್ಟ್ ಇದೆ ಎಂದೂ, ಅದರ ಶೀರ್ಷಿಕೆ 'ಡಂಕಿ' ಎಂದೂ ರಾಜ್‌ಕುಮಾರ್ ಉತ್ತರಿಸುತ್ತಾರೆ. ಹಾಸ್ಯವಿದೆಯೇ ಎಂಬ ಶಾರುಖ್ ಪ್ರಶ್ನೆಗೆ ಇದೆ ಎನ್ನುವ ನಿರ್ದೇಶಕರು, ರೊಮ್ಯಾನ್ಸ್ ಕೂಡ ಇದೆ. ಆದರೆ, ಹಿಂದಿನ ಚಿತ್ರಗಳಂತೆ ಕೈಗಳನ್ನು ಅಗಲ ಮಾಡಿಕೊಂಡು ನಿಲ್ಲುವಂಥ ಪ್ರೇಮವಲ್ಲ ಎಂದು ಕಾಲೆಳೆಯುತ್ತಾರೆ. ಅದಕ್ಕೆ ಶಾರುಖ್, ಕೈಗಳನ್ನೇ ಕತ್ತರಿಸಿಕೊಂಡು ಬಿಡುತ್ತೇನೆ ಎಂದು ಚಟಾಕಿ ಹಾರಿಸುತ್ತಾರೆ. ಕೊನೆಯಲ್ಲಿ 'ಡಂಕಿ' ಎಂದರೆ ಏನರ್ಥ ಎಂದು ಶಾರುಖ್ ಕೇಳುತ್ತಾರೆ. ಅಷ್ಟರಲ್ಲಿ ನಿರ್ದೇಶಕರು ಅಲ್ಲಿಂದ ನಾಪತ್ತೆ. 'ಡಂಕಿ'ಯೂ 'ಡಾಂಕಿಯೋ' ಏನೋ ಒಂದು. ಮಾಡಿದರಾಯಿತು ಎನ್ನುತ್ತಾ ಶಾರುಖ್ ಮುನ್ನಡೆಯುತ್ತಾರೆ.

ಈ ಇಬ್ಬರೂ ಸೇರಿ ಸಿನಿಮಾ ಮಾಡುವ ಪ್ರಸ್ತಾವ ಹಿಂದೆಯೂ ಇತ್ತು. ಆದರೆ, ಯಾವ ವಸ್ತುವಿಷಯವೂ ಶಾರುಖ್‌ಗೆ ಹೊಂದಿಕೆಯಾಗಿರಲಿಲ್ಲ. ಈಗ ಆ ಕಾಲ ಕೂಡಿಬಂದಿದೆ. 'ಹಿರಾನಿ ತಮ್ಮ ಪಾಲಿನ ಸಾಂತಾಕ್ಲಾಸ್' ಎಂದು ಶಾರುಖ್ ಟ್ವೀಟ್ ಮಾಡಿರುವುದೂ ಇದೇ ಕಾರಣಕ್ಕೆ. ■

